ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಾಮುಖ್ಯ ಆದ್ದು. [ಸಂ. 41.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ|| 13, ಸ್ಯ 1904.

IIನ ಭಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಯೆರೆಂದ ಕೊಡೋಪಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖೆ.

ಸಂದಲ್ ಹರಾಜು ನೋಟಿಫಿಕೇಷ್ಯ.

ತಾರೀಖು 18ನೆ ಆಗಸ್ಟ್ 1904ನೆ ಇಸವಿ.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಪೆಪ್ಯೂಟಿ ಕಮ್ಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು :—

ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.			ಮೊತ್ತ ಟನ್‌ಗಳು ಸ್ಯಾಲ್ ಪೆಚ್ಚು ಕಡಿಮೆ.	ಷರಾ.
ಮೈಸೂರು ...	ಹುಣಸೂರು ...	1904ನೆ ಇಸವಿ ನವಂಬರ್ ತಾರೀಖು		19	500	
ಡಿಟ್ಟೋ	ಶ್ರೀರಂಗಪಟ್ಟ	ಡಿಟ್ಟೋ	ಡಿಟ್ಟೋ	23	240	
ಬೆಂಗಳೂರು ...	ಬೆಂಗಳೂರು ..	ಡಿಟ್ಟೋ	ಡಿಟ್ಟೋ	26	120	ಕೋಲಾರ್ ಮತ್ತು ತುಮಕೂರು ಡಿಸ್ಟ್ರಿಕ್ಟ್ ಸಂದಲ್ ಕೇರಿಯತ್ತೆ.
ಹಾಸನ ...	ಹಾಸನ ..	1904ನೆ ಇಸವಿ ಡಿಸೆಂಬರ್ ತಾರೀಖು		1	200	
ಕಡೂರು ..	ಚಿಕ್ಕಮಗಳೂರು ..	ಡಿಟ್ಟೋ	ಡಿಟ್ಟೋ	5	200	
ಡಿಟ್ಟೋ ..	ತರೀಕೆರೆ ..	ಡಿಟ್ಟೋ	ಡಿಟ್ಟೊ	8	250	
ಶಿವಮೊಗ್ಗ ...	ಶಿವಮೊಗ್ಗ ...	ಡಿಟ್ಟೋ	ಡಿಟ್ಟೋ	12	440	ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಸಂದಲ್ ಕೇರಿಯತ್ತೆ.
ಡಿಟ್ಟೋ ..	ಸಾಗರ ..	ಡಿಟ್ಟೋ	ಡಿಟ್ಟೋ	15	175	
ಡಿಟ್ಟೋ ..	ತೀರ್ಥಹಳ್ಳಿ ..	ಡಿಟ್ಟೋ	ಡಿಟ್ಟೋ	19	175	ಕಡೂರು ಡಿಸ್ಟ್ರಿಕ್ಟ್ ಸಂದಲ್ ಕೇರಿಯತ್ತೆ.

2. ಪ್ರತಿಬಂದು ಕೋಠಿಯಲ್ಲಿಯು ಹರಾಜು ಮಾಡಲ್ಪಡುವ ಸಂದಲ್ ಲಾಟು ಮತ್ತು ಮೊತ್ತ ವಗ್ಯೆರೆ ತಪಶೀಲು ಐಯಿಂದ ಇದೇ ಸಾಲ್ ಅಕ್ಟೋಬರು ಅಖೈರು ವಳಗಾಗಿ ಫಾಯಿಷು ಮಾಡಲ್ಪಡುತ್ತದೆ.

ಎಂ. ಮುತ್ತಂಣ,
ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್ ಇನ್ ಮೈಸೂರು.

ನೋಟಿಸ್.

1904ನೆ ಇಸವಿ ಸೆಪ್ಟಂಬರ್ ತಿಂಗಳು 22ನೆ ತಾರೀಖಿನ IIನೆ ಭಾಗದ 544ನೆ ಪುಟದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಸ್ಟೇಟ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ಸುಗಳ ಪಸಾರೆ ಜಿನಸಿ ಜಪ್ತಾವಣೆ ಹಕ್ಕನ್ನು ಹರಾಜು ಮಾಡಲ್ಪಡುತ್ತದೆಂದು ಘೋಷಿಸಿರುವದು ಸರಿಯಷ್ಟೆ. ಆದರೆ ಅವುಗಳಲ್ಲಿ ಮಳವಳ್ಳಿ ತಾಲ್ಲೂಕಿನ ಪಸಾರೆ ಜಿನಸಿ ಜಪ್ತಾವಣೆ ಹಕ್ಕನ್ನು 1904ನೆ ಇಸವಿ ಅಕ್ಟೋಬರ್ 25ನೆ ತಾರೀಖಿನಲ್ಲಿ ಮಳವಳ್ಳಿ ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್‌ರವರು ಮತ್ತು ಡೇಂಜಾಫಿಸಂವರ ರೂಬರೂ ಹರಾಜು ಹಾಕಲ್ಪಡುತ್ತಾಗಿ ಇದರಿಂದ ಎಲ್ಲರಿಗೂ ತಿಳಿಸಲ್ಪಟ್ಟಿದೆ.

ಪರತ್ತು :— 37ನೆ ನಂಬರ್ ಮೈಸೂರು ಗೆಜೆಟ್ IIನೆ ಭಾಗದ 583ನೆ ಪುಟದಲ್ಲಿ 1904ನೆ ಇಸವಿ ಸೆಪ್ಟಂಬರ್ 2ನೆ ಮೇರಕುಂ ನೋಟಿಸನ್ನು ನೋಡಿ.

ಸಿ ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 7ನೆ ಸೆಪ್ಟಂಬರು 1904ನೆ ಇಸವಿ.

* ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಬಾಕಿ ಮೊಬಲಗಿಗೋಸ್ಕರವಾಗಿ ತಾಲ್ಲೂಕ ಅಮಲ್ದಾರರ ಕಛೇರಿಯಲ್ಲಿ 1904ನೆ ಇಸವಿ ಅಕ್ಟೋಬರು ಮಾಹೆ 31ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

*1. ಜೋಡಿ ವೀರಪಟ್ಟಿ ಹಳ್ಳಿ 2. ಬಾಯಂಗುತ್ತಾ ಕುಂಮರಕುಂಟೆ 3. ಟಿಟೋ ಚೆನ್ನರಸಂದ್ರ	... }	ಆವಣಿ ಹೋಬಳಿ ಮುಳಬಾಗಿಲ್ ತಾ|| ನರಸಾಪುರದ ಹೋಬಳಿ ಮಾಲೂರು ತಾ||

(ಪೂರ್ತಿ ಕಛೇರಿಲ್ ಬಗ್ಗೆ 1904ನೆ ಮಾರ್ಚ್ಂ 38ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 546, 548, 547ನೆ ನಂಬರ್ ಪೇಜು ನೋಡತಕ್ಕದ್ದು.)

ತಾರೀಖು 16ನೆ ಸೆಪ್ಟಂಬರ್ 1904ನೆ ಇಸವಿ.

* ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಕೋಲಾರ ತಾಲ್ಲೂಕಿಗೆ ಸೇರಿದ ಇನಾಂ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಬಾಕಿ ಮೊಬಲಗಿಗೋಸ್ಕರವಾಗಿ ತಾಲ್ಲೂಕು ಅಮಲ್ದಾರರ ಕಛೇರಿಯಲ್ಲಿ 1904ನೆ ಇಸವಿ ನವೆಂಬರ್ ಮಾಹೆ 1ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

*1. ಬಾಯಂಗುತ್ತಾ ಗಿರಿಯಂಪಾಟಿ 2. ಬಾಯಂಗುತ್ತಾ ಬಾಲಸಾಗರಹಳ್ಳಿ 3. ಜೋಡಿ ಪುಷ್ಪಗಿರಿ ಹಳ್ಳಿ	ವೇಮಗಲ್ ಹೋಬಳಿ. ವಕ್ಕಲೇರಿ ಹೋಬಳಿ.	

(ಪೂರ್ತಿ ಕಛೇರಿಲ್ ಬಗ್ಗೆ 1904ನೆ ಮಾರ್ಚ್ಂ 39ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 560, 561, 562, 563ನೆ ನಂಬರ್ ಪೇಜು ನೋಡತಕ್ಕದ್ದು.)

ತಾರೀಖು 22ನೆ ಸೆಪ್ಟಂಬರ್ 1904ನೆ ಇಸವಿ.

ಕೋಲಾರ ತಾಲ್ಲೂಕಿಗೆ ಸೇರಿದ * ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಬಾಕಿ ಮೊಬಲಗಿಗೋಸ್ಕರವಾಗಿ ತಾಲ್ಲೂಕು ಅಮಲ್ದಾರರ ಕಛೇರಿಯಲ್ಲಿ 1904ನೆ ಇಸವಿ ನವೆಂಬರ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

*1. ಬಾಯಂಗುತ್ತಾ ಜೊಕ್ಕಹಳ್ಳಿ 2. ಜೋಡಿ ತಲಗುಂದ 3. ಬಾಯಂಗುತ್ತಾ ಬಾಲೇಪೊಸಹಳ್ಳಿ	ವಕ್ಕಲೇರಿ ಹೋಬಳಿ. ಹುತ್ತೂರು ಹೋಬಳಿ.	

(ಪೂರ್ತಿ ಕಛೇರಿಲ್ ಬಗ್ಗೆ 1904ನೆ ಮಾರ್ಚ್ಂ 40ನೆ ನಂಬರ್ ಮೈಸೂರ ಗೆಜೆಟ್ 2ನೆ ಭಾಗದ 575, 576, 574ನೆ ನಂಬರ್ ಪೇಜು ನೋಡತಕ್ಕದ್ದು.)

ನೋಟಿಸ್.

ತಾರೀಖು 4ನೆ ಮಾಹೆ ನವೆಂಬರ್ 1904ನೆ ಇಸವಿ.

ಗವರ್ನಮೆಂಟ್ 1903ನೆ ಇಸವಿ ನವೆಂಬರ್ 13ನೆ ಮಾರ್ಚ್ಂ 1856—65ನೆ ನಂಬರ್ ಪ್ರೊಸಿಡಿಂಗ್ಸ್ ಪ್ರಕಾರ ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಆಫೀಸುಗಳಲ್ಲಿ ವಿಲೆ ಇಟ್ಟಿರುವ ನಿಷ್ಪ್ರಯೋಜನವಾದ ಮತ್ತು ಅಮುಖ್ಯವಾದ ರವಿನ್ಯೂ ರಿಕಾರ್ಡುಗಳನ್ನು ನಾಶಪಡಿಸಲ್ಪಟ್ಟಿದೆ. ಯಜಮಾನರು ದಸ್ತೈವಜುಗಳು ವಗೈರೆ ರಿಕಾರ್ಡುಗಳು ದಾಖಲೆ ಬಗ್ಗೆ ಹಾಜರುಮಾಡಿದ್ದರೆ ಅಂಥವುಗಳನ್ನು 1904ನೆ ಇಸವಿ ಡಿಸೆಂಬರ್ 31ನೆ ತಾರೀಖಿನ ಮೊಳಗಾಗಿ ಸಂಬಂಧಪಟ್ಟ ಆಫಿಸರಿಗೆ ಅಪ್ಲಿಕೇಷನ್ ಮಾಡಿ ಡಿಟೋ ದಸ್ತೈವಜುಗಳನ್ನು ವಾಪಸು ಪಡೆಯಬಹುದು. ಅಲ್ಲದೆ ಮೇಲ್ಕಂಡ ರಿಕಾರ್ಡಿನ ಕಾಪಿ ಬೇಕಾಗಿದ್ದರೂ ಡಿಟೋ ತಾರೀಖಿನ ಒಳಗಾಗಿ ಖಾಯಿಷ್ ಮಾಡಿ ಪಡೆಯಬಹುದು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷನರ್.